# 'ರಾಜ ಕಲಾವಿದ'ನಾದ ರವಿವರ್ಮ!

'ಹುಂ ಸ್ವಲ್ಪ ವಾಟರ್ ಕಲರ್ ಪೇಂಟಿಂಗ್ ಮಾಡ್ತೇನೆ. ತೈಲವರ್ಣಗಳನ್ನು ಮಾಡಲು ಧೈರ್ಯ ಸಾಲದು. ಒಮ್ಮೆ ನನ್ನ ಮನೆಗೆ ಟೀಗೆ ಬನ್ನಿ. ನನ್ನ ಚಿತ್ರಗಳನ್ನು ನೋಡುವಿರಂತೆ' ಎಂದು ಆಹ್ವಾನಿಸಿದಳು.

'ನಾನು ಟೀ ಕುಡಿಯುವುದಿಲ್ಲ...' ಎಂದೆ ನಸುನಗುತ್ತಾ. ನನ್ನ ನಗುವಿನೊಂದಿಗೆ ನಗೆ ಬೆರೆಸಿ 'ಆಯ್ತು, ಕಾಫಿಯನ್ನೇ ಮಾಡಿಕೊಡುತ್ತೇನೆ. ಇಲ್ಲಿದೆ ನನ್ನ ವಿಳಾಸ' ಎನ್ನುತ್ತಾ ಒಂದು ಕಾಗದದಲ್ಲಿ ಬರೆದುಕೊಟ್ಟು ಹೊರಟಳು.

ಫೆನಾಳ ಬಂಗಲೆ ಒಂದು ಸಣ್ಣ ಬೆಟ್ಟದ ಮೇಲಿತ್ತು. ಆಕೆ ಮದುವೆಯಾಗಿರದೆ ಒಬ್ಬಳೇ ಇದ್ದಳು. ಅವಳ ಮನೆಯಲ್ಲಿ ಕಾಫಿಯೊಂದಿಗೆ ಮಾತನಾಡುತ್ತಿದ್ದೆ; ಅವಳ ಚಿತ್ರಗಳನ್ನೆಲ್ಲಾ ನೋಡಿ ಆನಂದಿಸಿದೆ.

ಹೊರಡುವಾಗ 'ನನ್ನಿಂದ ಒಂದು ಸಣ್ಣ ಉಡುಗೊರೆ, ಮನೆಗೆ ಹೋದ ಮೇಲೆ ಪ್ಯಾಕೆಟ್ ಬಿಚ್ಚಿರಿ' ಎಂದು ನೀಡಿದಳು ಫೆನಾ. ಮನೆಗೆ ಬಂದು ನೋಡಿದಾಗ ಅದು ಎರಡು ಆಲ್ಬಂ, ಪಾಶ್ಚಿಮಾತ್ಯ ಕಲಾವಿದರು ರಚಿಸಿದ ಅದ್ಭುತ ಚಿತ್ರಗಳ ಮುದ್ರಿತ ಆಲ್ಬಂ. ನೋಡು ನೋಡುತ್ತಿದ್ದಂತೆ ನನ್ನ ಭಾವನೆಗಳು ಬದಲಾದವು. ಆವರೆಗೆ ನಾನು 'ಒಬ್ಬ ಕಲಾವಿದ ಪರದೇಶಕ್ಕೆ ಹೋಗಿ ಕಲಿಯಬೇಕಾದ್ದೇನೂ ಇಲ್ಲ, ವಾಸ್ತವಿಕತೆಯನ್ನು ಒಪ್ಪಿಕೊಂಡು ನಾವು ಹುಟ್ಟಿದ ನಾಡಿಗೆ ನಿಷ್ಠೆಯಾಗಿದ್ದರೆ ಸಾಕು, ಕಲೆ ಒಲಿಯುತ್ತದೆ' ಎಂಬ ಅಭಿಪ್ರಾಯ ಹೊಂದಿದ್ದೆ. ಅದನ್ನೇ ಫೆನಾಳಿಗೂ ಹೇಳಿದ್ದೆ.

ಆದರೆ ಆ ಪಾಶ್ಚಿಮಾತ್ಯ ಚಿತ್ರಕಾರರ ರಚನೆಗಳನ್ನು ಕೂಲಂಕುಷವಾಗಿ ನೋಡಿದಾಗ ನನ್ನ ಭಾವನೆ ಬದಲಾಗಿತ್ತು. ತಕ್ಷಣ ಫೆನಾಳಿಗೊಂದು ಪತ್ರ ಬರೆದು ಕಳುಹಿಸಿದೆ. 'ನನ್ನ ಬದುಕಿನಲ್ಲಿ ಎರಡು ಸುಂದರ ಉಡುಗೊರೆಗಳನ್ನು ಪಡೆದಿದ್ದೇನೆ. ಒಂದು ಬರೋಡಾ ಮಹಾರಾಜ ಸಯ್ಯಾಜಿರಾವ್‌ರವರು ಕೊಟ್ಟ ಐರೋಪ್ಯ ಬಣ್ಣಗಳು ಮತ್ತು ಕುಂಚಗಳು! ಮತ್ತೊಂದು ನೀನೀಗ ಕೊಟ್ಟಿರುವುದು! ಐರೋಪ್ಯ ಚಿತ್ರಕಲಾವಿದರ ಹಿರಿಮೆಯನ್ನು ಅರಿಯಲು ನನಗೆ ನಿನ್ನ ಉಡುಗೊರೆಯಿಂದ ಸಾಧ್ಯವಾಯಿತು. ತುಂಬಾ ಧನ್ಯವಾದಗಳು.'

ಅಂದಿನಿಂದ ಫೆನಾ ನನ್ನ ಸ್ಟುಡಿಯೋಗೆ ಆಗಾಗ ಬರುತ್ತಿದ್ದಳು. ವಿಯೆನ್ನ ವಸ್ತು ಪ್ರದರ್ಶನದಲ್ಲಿ ನನಗೆ ಪದಕಗಳೂ, ಪ್ರಶಸ್ತಿಗಳೂ ಬಂದಿರುವ ವಿಚಾರವನ್ನು ಗವರ್ನರ್ ಒಂದು ಪತ್ರದಲ್ಲಿ ಬರೆದು ತಿಳಿಸಿದ್ದರು. ನನ್ನ ಅಭಿಮಾನಿಗಳೆಲ್ಲಾ ನನ್ನ ಮನೆಯಲ್ಲಿ ಸೇರಿ ನನ್ನ ಯಶಸ್ಸನ್ನು ಕೊಂಡಾಡುವ ಯೋಜನೆ ಹಾಕಿದಾಗ, ನಾನು ಖಿನ್ನನಾಗಿ ಕುಳಿತಿದ್ದೆ. ನನ್ನ ಅನುಮತಿಯಿಲ್ಲದೆ ನನ್ನ ಕೋಣೆಗೆ ಪ್ರವೇಶಿಸುತ್ತಿದ್ದವಳು ಫೆನಾ ಒಬ್ಬಳೇ. ನನ್ನ ಖಿನ್ನತೆಯನ್ನು ಕಂಡು ಕೇಳಿದಳು. 'ಎಲ್ಲರೂ ಕೆಳಗೆ ನಿನಗಾಗಿ ಕಾದಿರುವಾಗ ನೀನೇಕೆ ಹೀಗಿರುವೆ?'

'ಏನೆಂದು ಸಂತೋಷಿಸಲಿ ಫೆನಾ? ನನ್ನನ್ನು ಪ್ರವರ್ಧಮಾನಕ್ಕೆ ತಂದ ನನ್ನ ಸೋದರಮಾವ ರಾಜರಾಜವರ್ಮ ಈಗಿಲ್ಲ; ನನಗೆ ಆಶ್ರಯವಿತ್ತ ಮಹಾರಾಜ ಆಯಿಲ್ಯ ತಿರುನಾಳ್ ಈಗಿಲ್ಲ, ನನ್ನನ್ನು ಎತ್ತಿ ಬೆಳೆಸಿದ ಅಪ್ಪಅಮ್ಮನೂ ಇಲ್ಲ, ನನ್ನನ್ನು ಅತೀವವಾಗಿ ಪ್ರೀತಿಸಿದ ಸುಗಂಧ ಕೂಡ ಇಲ್ಲ, ನನ್ನ ಯಶಸ್ಸನ್ನು ನೋಡಿ ಆನಂದಿಸುವವರು ಯಾರೂ ಇಲ್ಲದ ಮೇಲೆ ನಾನು ಯಾರಿಗಾಗಿ ಕೊಂಡಾಡಲಿ?'

ಫೆನಾ ಮಾತಿಲ್ಲದೆ ಹಿಂತಿರುಗಿ ಹೋಗತೊಡಗಿದಾಗ, ನಾನು ಧಾವಿಸಿ ಅವಳನ್ನು ಹಿಡಿದೆ 'ಕ್ಷಮಿಸು, ನಿನಗೆ ನೋವುಂಟು ಮಾಡಿದೆ. ನಿನ್ನಂತಹ ಅಭಿಮಾನಿಯಿರುವಾಗ ನಾನೇಕೆ ಕೊಂಡಾಡಬಾರದು?' ಎಂದೆ ನಸುನಗುತ್ತಾ.

'ರವಿ! ನಿನದುಃಖ ನನಗೆ ಅರ್ಥವಾಗುತ್ತದೆ.




■ ಗೀತಾ ಸೀತಾರಾಮ್

ಆದರೆ ಬದುಕು ಯಾರಿಲ್ಲದಿದ್ದರೂ ಮುಂದೆ ಮುಂದೆ ಸಾಗುತ್ತದೆ. ನಿನ್ನ ಕಲೆಗಾಗಿ ಜೀವತೆತ್ತ ಸುಗಂಧಳಂತಹ ಅಭಿಮಾನಿಯನ್ನು ನಿನ್ನ ಬದುಕಿನಲ್ಲಿ ಪಡೆದದ್ದಕ್ಕಾಗಿ ನೀನು ಸಂತಸಪಡಬಹುದಲ್ಲವೆ? ನಿನ್ನ ಹಿರಿಯರ ಆಶೀರ್ವಾದದ ಬಲದಿಂದಲೇ ಅಲ್ಲವೆ ನಿನ್ನ ಕಲೆಗೆ ಇಷ್ಟೊಂದು ಯಶಸ್ಸು ದೊರೆಯುತ್ತಿರುವುದು. ಇದು ಅವರಿಗೆ ನೀಡುವ ಕೃತಜ್ಞತೆ ಯಾಕಾಗಬಾರದು? ನಡೆ, ಎಲ್ಲರೂ ನಿನಗಾಗಿ ಕಾಯುತ್ತಿದ್ದಾರೆ. ಅವರ ಸಂತೋಷದಲ್ಲಿ ನೀನೂ ಭಾಗಿಯಾಗು' ಎಂದಳು.

ಒಮ್ಮೆ ಫೆನಾ ಹೇಳಿದಳು 'ರವಿ! ನೀನೊಬ್ಬ ಅಸಾಮಾನ್ಯ ಕಲಾವಿದ. ಮೇವಾರ ಭಾವನಗರಗಳ ಅರಮನೆಗಳಿಗೆ ರಾಜ ಕುಟುಂಬದವರ ಭಾವಚಿತ್ರಗಳನ್ನು ರಚಿಸಿಕೊಡುವ ಕೆಲಸ ಒಂದು ಕಡೆ; ಮುದ್ರಣಾಲಯದ ಗುರುತು ಜವಾಬ್ದಾರಿ ಒಂದು ಕಡೆ; ಏಕೆ ಹೀಗೆ ಎರಡೂ ಕಡೆ ಹರಿದು ಹಂಚಿ ಹೋಗಿದ್ದೀಯ? ಮುದ್ರಣಾಲಯವನ್ನು ಬೊಂಬಾಯಿಂದ ಕರ್ಲಾಗೆ ವರ್ಗಾಯಿಸಿದ ಮೇಲಂತೂ ನಿನಗೆ ನಿದ್ರಾಹಾರಗಳೂ ಇಲ್ಲವಾಗಿದೆ. ನನ್ನ ಪ್ರಕಾರ ನೀನಿನ್ನು ಮುದ್ರಣಾಲಯದ ಕೆಲಸ ಮಾಡಬೇಡ, ಅದನ್ನು ಯಾರಿಗಾದರೂ ವಹಿಸಿಬಿಡು.'

ಅವಳ ಮಾತಿನಲ್ಲಿ ತಥ್ಯವಿದೆ ಎನಿಸಿತು. ಅಂತೆಯೇ ನನ್ನ ಮುದ್ರಣಾಲಯದ ಜರ್ಮನ್ ತಂತ್ರಜ್ಞ ಸ್ಕೈಚರ್‌ಗೆ ನನ್ನ ಮುದ್ರಣಾಲಯವನ್ನು ಇಪ್ಪತ್ತೈದು ಸಾವಿರಕ್ಕೆ ಮಾರಿಬಿಟ್ಟೆ. ಯಾರಿಗಾದರೂ ಐವತ್ತು ಅರವತ್ತು ಸಾವಿರಕ್ಕೆ ಮಾರುವ ಅವಕಾಶಗಳಿತ್ತು. ಆದರೆ ಸ್ಕೈಚರ್ ಅದನ್ನು ಹುಟ್ಟಿನಿಂದ ಬೆಳೆಸಿದ್ದ. ನನ್ನ ಕಲೆಯ ಮೇಲೆ ಅವನಿಗೆ ಅತೀವ ಅಭಿಮಾನವಿತ್ತು. ಹಾಗಾಗಿ ಅದನ್ನು ಕಡಿಮೆ ಬೆಲೆಗಾದರೂ ಅವನಿಗೇ ಕೊಟ್ಟಿದ್ದಕ್ಕೆ ನನಗೆ ತೃಪ್ತಿಯಿತ್ತು.

ಫೆನಾ ನನ್ನ ಚಿತ್ರಕಲಾ ಶಿಷ್ಯೆಯಾಗಿ ಬಂದು ರಾಜವರ್ಮ, ಧುರಂಧರ, ಜೋಷಿಯರೊಂದಿಗೆ ಸೇರಿಕೊಂಡಳು. ಅವಳು 'ಲಂಡನ್ ಸ್ಕೂಲ್ ಆಫ್ ಆರ್ಟ್ಸ್‌ನಲ್ಲಿ ಒಂದು ವರ್ಷದ ಡಿಗ್ರಿ ಮಾಡಿದ್ದಳು. ಅಲ್ಲಿ ಒಬ್ಬನನ್ನು ಪ್ರೀತಿಸಿದ್ದಳು. ಆದರೆ ಆತ ದುರದೃಷ್ಟವಶಾತ್ ಥೇಮ್ಸ್ ನದಿಯಲ್ಲಿ ಮುಳುಗಿ ಅಪಘಾತದಲ್ಲಿ ಸತ್ತಿದ್ದ. ಆ ದುಃಖವನ್ನು ನುಂಗಿಕೊಂಡು ಅವಳು ಕಲೆಗಾಗಿ ಬದುಕುತ್ತಿದ್ದಳು.

ನಮ್ಮಿಬ್ಬರಿಗೂ ಪರಸ್ಪರ ಪ್ರೀತಿಯಿದೆ ಎಂಬ ಅರಿವಾದರೂ ಇಬ್ಬರೂ ದೈಹಿಕ ಸ್ತರದಲ್ಲಿ ಒಬ್ಬರನ್ನೊಬ್ಬರು ಆಧರಿಸಲು ಇಷ್ಟಪಡಲಿಲ್ಲ. ಮಾನಸಿಕವಾಗಿ ನಾವಿಬ್ಬರೂ ಒಬ್ಬರಿಗೊಬ್ಬರು ಆಧಾರವಾಗಿದ್ದೆವು. ಪ್ರೀತಿ, ಸ್ನೇಹಗಳಲ್ಲಿ ಅನೇಕ ವಿಧಗಳಿವೆ. ನಮ್ಮಿಬ್ಬರದೂ ಒಂದು ವಿಶೇಷವಾದ ಬಂಧ! ಅದಕ್ಕೆ ಯಾವುದೇ ಹೆಸರನ್ನು ಕೊಡಲು ನಾವಿಬ್ಬರೂ ಇಚ್ಛಿಸಲಿಲ್ಲ ಎಂಬುದಂತೂ ನಿಜ!

## ಫೆನಾ

ಅದೇನೋ ರವಿವರ್ಮನನ್ನು ಮೊದಲ ಬಾರಿ ಕಂಡಾಗಲಿಂದ ನನಗೆ ಅವನಲ್ಲಿ ಒಂದು ಅರ್ಥೈಸಲಾರದ ಆತ್ಮೀಯತೆ. ನಾವಿಬ್ಬರೂ ಮನಸ್ಸು ಮಾಡಿದ್ದರೆ ದೈಹಿಕವಾಗಿ ಹತ್ತಿರವಾಗುವುದೇನು ಅಸಾಧ್ಯವಿರಲಿಲ್ಲ. ಆದರೆ ಇಬ್ಬರಿಗೂ ಹಿಂದಿನ ಪ್ರೀತಿಪ್ರೇಮಗಳ ಜೊತೆಗೆ ಕಹಿ ಅನುಭವಗಳೂ ಸೇರಿಕೊಂಡಿದ್ದರಿಂದಲೋ ಏನೋ, ನಮಗೆ ದೈಹಿಕ ಸ್ತರದ ಬಂಧನ ಬೇಕೆನಿಸಲಿಲ್ಲ. ಬೌದ್ಧಿಕ ಗೆಳೆತನ, ಭಾವನಾತ್ಮಕವಾಗಿ ಪರಸ್ಪರ ಅವಲಂಬನೆ, ಆಂತರಿಕವಾದ ಆತ್ಮೀಯತೆ ಇವೇ ನಮಗೆ ಆಪ್ಯಾಯಮಾನವಾಗಿತ್ತು. ಒಬ್ಬರನ್ನೊಬ್ಬರು ಒಂದು ದಿನವೂ ಭೇಟಿಯಾಗದೆ ಇರುತ್ತಿರಲಿಲ್ಲ. ನನ್ನನ್ನು ಅವನ ಚಿತ್ರಕಲೆಯ ಶಿಷ್ಯೆಯನ್ನಾಗಿ ಸ್ವೀಕರಿಸಿದ ಮೇಲಂತೂ ನಾನು ದಿನವೂ ಅವನ ಸ್ಟುಡಿಯೋದಲ್ಲಿ ತಾಸುಗಟ್ಟಲೆ ಚಿತ್ರ ಬರೆಯುತ್ತಿದ್ದೆ. ಜೊತೆಗೆ, ಜೋಷಿ, ದುರಂಧರ, ರಾಜವರ್ಮರು